ರಾ ಗ – ಪೂ ರ್ವಿ ಕ ಲ್ಯಾ ಣಿ : ತಾ ಳ – ಆ ದಿ ತಾ ಳ

ದಾಸಗುರೊ ಹರಿ ದಾಸಗುರೊ
ವಾಸವನಾಮಕ ದಾಸಗುರೊ ।ಪ।

ಭೂಸುರರಿಗೆ ಧನರಾಶಿ ಸಮರ್ಪಿಸಿ
ವ್ಯಾಸರಾಯರುಪದೇಶಗೊಂಡ ।ಅ ಪ।

ಜಲಜಭವನ ಪಿತನಾಜ್ಞೆಯಲಿ । ಈ
ಕಲಿಯುಗದಲಿ ಜನ್ಮತಾಳುತಲಿ ॥
ಅಲವಬೋಧರಮತ ನೆಲೆಯನು ಸುಲಭದಿ
ತಿಳಿಗನ್ನಡದಲಿ ತಿಳುಹಿಸಿ ಸಲಹಿದ ।೧।

ಪವನ ದೇವನ ಒಲಿಸುತಲಿ । ಮಾ
ಧವನ ಸ್ತುತಿಸಿ ಸಲೆ ಕುಣಿಯುತಲಿ ॥
ಕವನದಿ ಭಕುತಿಯ ನವವಿಧಮಾರ್ಗವ
ಅವನಿಗೆ ಬೀರಿದ ದಿವಿಜಮೌನಿವರ ।೨।

ಕಾಮಿತಫಲಗಳಗರೆಯುತಲಿ । ಬಲು
ಪಾಮರಜನರನು ಸಲಹುತಲಿ ॥
ಶ್ರೀಮನೋವಲ್ಲಭ ಶ್ಯಾಮಸುಂದರನ
ನಾಮಾಮೃತವನು ಪ್ರೇಮದಿಂದುಣಿಸಿದ ।೩।

**ಯ ತಿ ಕ ಕ್ಷೈ**

**ಶ್ರೀ ವಿ ಷ್ಣು ತೀ ರ್ಥಾ ಯ ನ ಮಃ**



ಶ್ರೀ ವಿಷ್ಣುತೀರ್ಥರು – ಮಾದನೂರು

ಯಸ್ಯ ಪ್ರಚಂಡ ತಪಸಾ ಶ್ರುತಿ ಗೀತ ವೃತ್ತಿಃ
ತುಷ್ಟೋ ಹರಿಃ ಕಿಲ ವಶಂ ವದತಾಮವಾಪ
ಶ್ರೀ ಮಧ್ವಸನ್ಮತ ಪಯೋನಿಧಿ ಪೂರ್ಣಚಂದ್ರಃ
ಶ್ರೀವಿಷ್ಣುತೀರ್ಥ ಮುನಿರಾಟ್ ಮುದಮಾತನೋತು

ಯಾರ ಕಠಿಣ ತಪಸ್ಸಿನಿಂದ, ಶೃತಿಯಿಂದ ಪ್ರತಿಪಾದ್ಯ ಮಹಿಮೆಯುಳ್ಳ, ಸಂತುಷ್ಟನಾದ ಭಗವಂತನು ಪ್ರತ್ಯಕ್ಷನಾದನೋ ಅಂತಹ, ಮಧ್ವಮತವೆಂಬ ಸಮುದ್ರದಿಂದ ಬಂದ ಚಂದ್ರನಂತಿರುವ ಮುನಿಶ್ರೇಷ್ಠರಾದ ವಿಷ್ಣುತೀರ್ಥರು ನಮಗೆ ಆನಂದವನ್ನು ನೀಡಲಿ.

( ಆ ರಾ ಧ ನೆ : ಮಾ ಘ ಕೃ ಷ್ಣ ಪ ಕ್ಷ ತ್ರ ಯೋ ದ ಶಿ )

ರಾ ಗ – ಆ ನ ಂ ದ ಭೈ ರ ವಿ : ತಾ ಳ – ಝ ಂ ಪೆ ತಾ ಳ

ಅಡವಿ ಆಚಾರ್ಯರ ಅಡಿಯ ಪೊಂದಿದ ಜನರು
ಅಡಿಗಡಿಗೆ ಬಹುಪುಣ್ಯ ಪಡೆದು ಕೊಂಬುವರು ।ಪ।

ಪೊಡವಿಯಲಿ ಸಂಸಾರಮಡುವಿನಲಿ ಮುಣುಮುಣುಗಿ
ಬಡವರಂತತಿಬಾಯ ಬಿಡುವರಲ್ಲವರು ।ಅ ಪ।

ಪಂಚರತ್ನವ ಪಠಿಸಿ ಪಂಚಮೂರ್ತಿಗಳನ್ನು
ಮುಂಚೆ ತಿಳಿವರು ಈ ಪ್ರಪಂಚದಲ್ಲಿ
ಹಂಚಿಕೆಯಲಿ ಮತ್ತೆ ಪಂಚಭೇದವ ತಿಳಿದು
ಪಂಚಮಹಾಪಾಪಗಳ ಮುಂಚೆ ಕಳೆವವರು ।೧।

ಭಂಗ ಬಿಡಿಸುವ ಸುಧೆಯ ಮಂಗಳಾರ್ಥವ ತಿಳಿದು
ಅಂಗದಲಿ ಸುರಿವರು ಕಂಗಳೋದಕವ
ಮಂಗಳಾಂಗನ ಅಂತರಂಗದಲಿ ಸ್ಮರಿಸುತ್ತ
ಮುಂಗೈಯ ಮುದ್ರೆಗಳ ಧರಿಸುವರಿವರು ।೨।

ವಾಸುದೇವನ ದಾಸದಾಸರಾದೆವೆಂಬೊ
ಆಶೆಯಲಿ ಅವನ ಸಹವಾಸ ಬಯಸುವರು
ಶ್ರೀಸುಧಾರ್ಥಾನಂತಾದ್ರೀಶನಲ್ಲೆ ಭಕುತಿ
ಏಸು ಕಾಲಕು ಬಿಡದೆ ಬ್ಯಾಸರದೆ ಬೇಡುವರು ।೩।

## ಶ್ರೀ ವ ರ ದೇ ಂ ದ್ರ ತೀ ರ್ಥಾ ಯ ನ ಮಃ



ಶ್ರೀ ವರದೇಂದ್ರರು – ಪೂನಾ

ವಾದೇ ವಿಜಯಶೀಲಾಯ ವರದಾಯ ವರಾರ್ಥಿನಾಂ ।
ವದಾನ್ಯ ಜನಸಿಂಹಾಯ ವರದೇಂದ್ರಾಯ ತೇ ನಮಃ ॥

ವಾದದಲ್ಲಿ ಸದಾ ವಿಜಯಿಗಳಾದ, ಬೇಡುವವರಿಗೆ ವರದಾಯಿ–ಗಳಾದ, ಉತ್ತಮ ಮಧುರ ಭಾಷಿಗಳಾದ ವರದೇಂದ್ರರೆನಿಸಿದ ನಿಮಗೆ ನನ್ನ ಪ್ರಣಾಮಗಳು.

( ಆ ರಾ ಧ ನೆ : ಆ ಷಾ ಢ ಶು ದ್ಧ ಷ ಷ್ಠಿ )



ಪ್ರಾಣೇಶದಾಸರಿಗೆ ಒಲಿದು ಬಂದ ಶ್ರೀವರದೇಂದ್ರರು-ಕಸಬ ಲಿಂಗಸೂಗೂರು

ರಾ ಗ - ಭೈ ರ ವಿ : ತಾ ಳ - ಅ ಟ ತಾ ಳ

ಹಿಂದಿನ ಸುಕರ್ಮವೇಸು ಬಂದೊದಗಿದವೊ ವರ
ದೇಂದ್ರರಾಯ ಬಂದ ನಮ್ಮ ಮಂದಿರಕಿಂದು ।ಪ।

ಮುತ್ತಿನ ಅಂದಣದೊಳು ಸತ್ತಿಗೆ ನೆರಳಲಿ ಪ್ರ
ಶಸ್ತವಾಗಿ ವೇದಶಾಸ್ತ್ರ ಒತ್ತಿ ಓದುವ
ಉತ್ತಮ ಬುಧರ ಕೂಡ ಭೃತ್ಯರ ಸಂಗಡ ಬಹು
ಹತ್ತೆಂಟು ಬಿರುದಾವಳಿಯುಕ್ತ ಬಂದರು ।೧।

ತಂಡ ತಂಡದಿ ಜನರು ಹಿಂಡುಗೂಡಿ ಫಲಗಳ
ಕೊಂಡು ಬಂದು ಮಾಡುವರು ದಂಡ ಪ್ರಣಾಮ
ಪಂಡಿತಾಗ್ರಗಣ್ಯರು ಭೂಮಂಡಲದೊಳಗಾಗ ಶ್ರೀಯಾ
ಖಂಡಲನಂತೆ ತೋರ್ಪ ಕಮಂಡಲುಧರ ।೨।

ಶ್ರೀಕರ ಪ್ರಾಣೇಶನೇಕಾಂತದಿ ಒಲಿಸುವಲ್ಲಿ
ಈ ಕುಂಭಿಣಿಯೊಳಗೀತಗೆ ಸರಿ ಕಾಣೆ ನೋಡ
ನೀ ಕಾಯ ಬೇಕೆಂದವರ ಶೋಕವ ಪರಿಹರಿಸಿ
ಜೋಕೆ ಮಾಡುವ ನಿತ್ಯ ದೇಶಿಕ ಕುಲಪತಿ ।೩।

**ಶ್ರೀ ಸ ತ್ಯ ಬೋ ಧ ತೀ ರ್ಥಾ ಯ ನ ಮಃ**




ಶ್ರೀ ಸತ್ಯಭೋಧರು – ಸವಣೂರು

ನೈವೇದ್ಯಗವಿಷಂ ರಾಮೇ ವೀಕ್ಷ್ಯ ತದ್ಭುಕ್ತಿಭಾಕ್ ಗುರುಃ ।
ಯೋಽದರ್ಶಯದ್ರವಿಂ ರಾತ್ರೌ ಸತ್ಯಬೋಧೋಸ್ತು ಮೇ ಮುದೇ ॥

ನೈವೇದ್ಯದಲ್ಲಿನ ವಿಷವನ್ನು ರಾಮನಲ್ಲಿ ಕಂಡು ಅದನ್ನು ಸೇವಿಸಿದ, ರಾತ್ರಿಯಲ್ಲಿ ಸೂರ್ಯನ ದರ್ಶನವನ್ನು ಮಾಡಿಸಿದ ಸತ್ಯಬೋಧತೀರ್ಥರು ನಮಗೆ ಸಂತೋಷವನ್ನುಂಟು ಮಾಡಲಿ.

( ಆ ರಾ ಧ ನೆ : ಫಾ ಲ್ಗು ಣ ಕೃ ಷ್ಣ ಪ ಕ್ಷ ಪ್ರ ತಿ ಪ ದ )

ರಾ ಗ – ಪ ಂ ತು ವ ರಾ ಳಿ : ತಾ ಳ – ಅ ಟ ತಾ ಳ


ನಾ ಧನ್ಯನಾದೆನಿಂದು ಸತ್ಯ
ಬೋಧರಾಯರ ದಿವ್ಯಪಾದಕಮಲವ ಕಂಡು ।ಪ।

ಹಿಂಗಿದುವಖಿಲದೋಷಂಗಳು ಈ ಮುನಿ
ಪುಂಗವರಂಘ್ರಿಸಂದರುಶನದಿ
ಗಂಗಾದಿ ತೀರ್ಥ ಭುಜಂಗಾದ್ರಿ ಮೊದಲಾದ
ತುಂಗಯಾತ್ರೆ ಫಲ ಸಮನೆನಿಸಿತು ।೧।

ದಾವಮುನಿಗಳೊ ದಾವ ದೇವತೆಗಳೊ
ದಾವರುಬಲ್ಲರು ಅವರಗತಿ
ಸೇವಿಪಜನರ ಕೃಪಾವಲೋಕನದಿಂದ
ಪಾವನಮಾಡುವ ಕೋವಿದಾರ್ಯರ ಕಂಡು ।೨।

ಸೀತಾರಮಣ ಜಗನ್ನಾಥವಿಟ್ಠಲರೇಯ
ಭೂತಳದೊಳು ಈ ಮಹಾತ್ಮರನು
ಪ್ರೀತಿಯಿಂದಲಿ ತಾ ಸೃಜಿಸಿದ ಜಗದಿ ಪು
ನೀತರ ಮಾಡಲು ತಾ ತಕ್ಷಣದಿ ।೩।

## ಶ್ರೀ ಮ ದ್ರಾ ಘ ವೇ ಂ ದ್ರ ಗು ರ ವೇ ನ ಮಃ



ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮ ರತಾಯಚ
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ಸತ್ಯ ಮತ್ತು ಧರ್ಮದಲ್ಲಿ ಆಸಕ್ತರೂ, ಭಜಿಸುವವರಿಗೆ ಕಲ್ಪವೃಕ್ಷವೂ, ನಮಿಸುವವರಿಗೆ ಕಾಮಧೇನುಗಳೂ ಆದ ಪೂಜ್ಯರಾದ ರಾಘವೇಂದ್ರರನ್ನು ನಮಿಸುವುದು.

ಮೂಕೋಽಪಿ ಯತ್ಪ್ರಸಾದೇನ । ಮುಕುಂದ ಶಯನಾಯತೇ ।
ರಾಜ ರಾಜಾಯತೇ ರಿಕ್ತೋ । ರಾಘವೇಂದ್ರಂ ತಮಾಶ್ರಯೇ ॥

ಯಾರ ಅನುಗ್ರಹದಿಂದ ಮೂಕನೂ ವಾಕ್‌ಪಟುವಾಗಬಲ್ಲ; ದರಿದ್ರನೂ ರಾಜನಾಗಬಲ್ಲ ; ಅಂತಹ ರಾಘವೇಂದ್ರರನ್ನು ಶರಣು ಹೋಗುವೆ.



ಗುರುಶ್ರೀ ರಾಘವೇಂದ್ರಾಯ ತ್ವಾಮಹಂ ಶರಣಂ ಗತಃ ।
ಆಯುರಾರೋಗ್ಯಮೈಶ್ವರ್ಯಂ ದತ್ವಾ ತ್ವಂ ರಕ್ಷ ರಕ್ಷಮಾಂ ॥

ಗುರುಗಳಾದ ರಾಘವೇಂದ್ರರೇ । ನಿಮ್ಮನ್ನೇ ಆಶ್ರಯಿಸಿ ಬಂದಿದ್ದೇನೆ. ಆಯುಸ್ಸು, ಆರೋಗ್ಯ, ಐಶ್ವರ್ಯ, ಇವುಗಳನ್ನು ನೀಡಿ ನಮ್ಮನ್ನು ರಕ್ಷಿಸಿರಿ.

ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ ।
ಶ್ರೀ ರಾಘವೇಂದ್ರ ಗುರವೇ ನಮೋಽತ್ಯಂತ ದಯಾಲವೇ ॥

ಕುವಾದಿಗಳೆಂಬ ತಮಸ್ಸಿಗೆ ಸೂರ್ಯನ ಹಾಗಿರುವ, ವೈಷ್ಣವರೆಂಬ ಕುಮುದ ಪುಷ್ಪಗಳಿಗೆ ಚಂದ್ರನಂತಿರುವ, ಕಾರುಣ್ಯ ಸಿಂಧುಗಳಾದ, ರಾಘವೇಂದ್ರ ಗುರುಗಳಿಗೆ ಪ್ರಣಾಮಗಳು.

( ಆ ರಾ ಧ ನೆ : ಶ್ರಾ ವ ಣ ಕೃ ಷ್ಣ ಪ ಕ್ಷ ಬಿ ದಿ ಗೆ )



ರಾಗ – ಆನಂದಭೈರವಿ : ತಾಳ – ಏಕತಾಳ

ರಾಯಬಾರೊ ತಂದೆತಾಯಿ ಬಾರೊ ನಮ್ಮನ್ ಕಾಯಿ ಬಾರೊ
ಮಾಯಿಗಳ ಮರ್ದಿಸಿದ ರಾಘವೇಂದ್ರ ರಾಯ ಬಾರೊ ।ಪ।

ಭಾಸುರಚರಿತನೆ ಭೂಸುರವಂದ್ಯನೆ
ಶ್ರೀಸುಧೀಂದ್ರಾರ್ಯರ ವರಪುತ್ರ ರಾಯ ಬಾರೊ
ಶ್ರೀಸುಧೀಂದ್ರಾರ್ಯರ ವರಪುತ್ರನೆನಿಸಿದ
ದೇಶಿಕರೊಡೆಯನೆ ರಾಘವೇಂದ್ರ ರಾಯ ಬಾರೊ ।೧।

ವಂದಿಪ ಜನರಿಗೆ ಮಂದಾರತರುವಂತೆ
ಕುಂದದಭೀಷ್ಟೆಯ ಸಲಿಸುತಿಪ್ಪ ರಾಯ ಬಾರೊ
ಕುಂದದಭೀಷ್ಟೆಯ ಸಲಿಸುತಿಪ್ಪ ಸುರಮಣಿ
ಮಂದನ ಮತಿಗೆ ರಾಘವೇಂದ್ರ ರಾಯ ಬಾರೊ ।೨।

ಆರು ಮೂರು ಏಳು ನಾಲ್ಕು ಎಂಟು ಗ್ರಂಥಸಾರಾರ್ಥ
ತೋರಿಸಿದಿ ಸರ್ವರಿಗೆ ನ್ಯಾಯದಿಂದ ರಾಯ ಬಾರೊ
ತೋರಿಸಿದಿ ಸರ್ವರಿಗೆ ನ್ಯಾಯದಿಂದ ಸರ್ವಜ್ಞ
ಸೂರಿಗಳರಸನೆ ರಾಘವೇಂದ್ರ ರಾಯ ಬಾರೊ ।೩।

ರಾಮಪದಸರಸೀರುಹಭೃಂಗ ಭಕ್ತಕೃಪಾಪಾಂಗ
ಭ್ರಾಮಕಜನರ ಸನ್ಮಾನಭಂಗ ರಾಯ ಬಾರೊ
ಭ್ರಾಮಕಜನರ ಸನ್ಮಾನಭಂಗ ಮಾಡಿದ
ಧೀಮಂತರೊಡೆಯನೆ ರಾಘವೇಂದ್ರ ರಾಯ ಬಾರೊ ।೪।

ಭೂತಳನಾಥನ ಭೀತಿಯ ಬಿಡಿಸಿದೆ
ಪ್ರೇತತ್ವ ಕಳೆದೆ ಮಹಿಷಿಯ ರಾಯ ಬಾರೊ
ಪ್ರೇತತ್ವ ಕಳೆದೆ ಮಹಿಷಿಯ ಶ್ರೀ ಜಗ
ನ್ನಾಥವಿಟ್ಠಲನ ಪ್ರೀತಿಪಾತ್ರ ರಾಘವೇಂದ್ರ ರಾಯ ಬಾರೊ ।೫।



ರಾಗ – ಮಧ್ಯಮಾವತಿ : ತಾಳ – ಅಟತಾಳ

ಬಾರೋ ಗುರು ರಾಘವೇಂದ್ರ । ಬಾರಯ್ಯ ಬಾ ಬಾ
ಬಾರೋ ಗುರು ರಾಘವೇಂದ್ರ ।ಪ।

ಹಿಂದು ಮುಂದಿಲ್ಲೆನಗೆ ನೀ ಗತಿ ।
ಯೆಂದು ನಂಬಿದೆ ನಿನ್ನ ಪಾದವ ।
ಬಂಧನವ ಬಿಡಿಸೆನ್ನ ಕರಪಿಡಿ
ನಂದಕಂದ ಮುಕುಂದ ಬಂಧು ।ಅ ಪ।

ಸೇವಕನೆಲೊ ನಾನು । ಧಾವಿಸಿ ಬಂದೆನು ।
ಸೇವೆಯ ನೀಡೆಲೊ ನೀನು ॥
ಸೇವಕನ ಸೇವೆಯನು ಸೇವಿಸಿ ।
ಸೇವ್ಯ ಸೇವಕ ಭಾವವೀಯುತ ॥
ಠಾವುಗಾಣಿಸಿ ಪೊರೆಯೊ ಧರೆಯೊಳು ।
ಪಾವನಾತ್ಮಕ ಕಾವ ಕರುಣಿ ।೧।

ಕರೆದರೆ ಬರುವಿಯೆಂದು । ಸಾರುವುದು ಡಂಗುರ ।
ತ್ವರಿತದಿ ಒದಗೋ ಬಂದು ॥
ಜರಿಯ ಬೇಡವೊ ಬರಿದೆ ನಿನ್ನಯ ।
ವಿರಹ ತಾಳದೆ ಮನದಿ ಕೊರಗುವೆ ॥
ಹರಿಯ ಸ್ಮರಣೆಯ ನಿರುತದಲಿ ಎನ
ಗ್ಹರುಷದಲಿ ನೀ ನಿರುತ ಕೊಡುತಲಿ ।೨।

ನರಹರಿ ಪ್ರಿಯನೇ ಬಾ । ಗುರುಶ್ರೀಶವಿಟ್ಠಲನ
ಕರುಣಾಪಾತ್ರನೇ ಬೇಗ ಬಾ ॥
ಗುರುವರನೆ ಪರಿಪೋಷಿಸೆನ್ನನು ।
ಮರೆಯದಲೆ ತವ ಶರಣ ಕೋಟಿಯ-
ಲಿರಿಸಿ ಚರಣಾಂಬುಜವ ತೋರುತ
ತ್ವರಿತದಲಿ ಓಡೋಡಿ ಬಾ ಬಾ ।೩।

ರಾಗ - ಮಧ್ಯಮಾವತಿ : ತಾಳ - ಆದಿತಾಳ

ಕೋರಿ ಕರೆವೆ ಗುರು ಶ್ರೀರಾಘವೇಂದ್ರನೆ
ಬಾರೋ ಮಹಾ ಪ್ರಭುವೆ ।ಪ।

ಚಾರುಚರಣ ಯುಗ ಸಾರಿ ನಮಿಪೆ ಬೇಗ
ಬಾರೊ ಹೃದಯ ಸುಜಸಾರ ರೂಪವ ತೋರೊ ।ಅ ಪ।

ಎಲ್ಲಿ ನೋಡಲು ಹರಿ ಅಲ್ಲಿ ಕಾಣುವನೆಂದು
ಕ್ಷುಲ್ಲ ಕಂಭವನೊಡೆದು
ನಿಲ್ಲದೆ ನರಹರಿ ಚೆಲ್ವಿಕೆ ತೋರಿದ
ಫುಲ್ಲಲೋಚನ ಶಿಶು ಪ್ರಹ್ಲಾದನಾಗಿ ಬಾರೊ ।೧।

ದೋಷ ಕಳೆದು ಸಿಂಹಾಸನವೇರಿದ
ದಾಸ ಕುಲವ ಪೊರೆದ
ಶ್ರೀಶನರ್ಚಕನಾಗಿ ಪೋಷಿಸಿ ಹರಿಮತ
ವ್ಯಾಸ ತ್ರಯವಗೈದ ವೇಷ ಕಳೆದು ಬಾರೊ ।೨।


ಮೂಜಗ ಮಾನಿತ ತೇಜೋವಿರಾಜಿತ
ಮಾಜದ ಮಹಾಮಹಿಮ
ಓಜಗೊಳಿಸಿ ಮತಿ ರಾಜೀವ ಬೋಧದಿ
ಪೂಜೆಗೊಂಬುವ ಗುರುರಾಜ ರೂಪದಿ ಬಾರೊ ।೩।

ಮಂತ್ರ ಸದನದೊಳು ಸಂತಸುಜನರಿಗೆ
ಸಂತೋಷಸಿರಿ ಗರೆದು
ಕಂತುಪಿತನ ಪದ ಸಂತತ ಸೇವಿಪ
ಶಾಂತ ಮೂರುತಿ ಎನ್ನಂತರಂಗದಿ ಬಾರೊ ।೪।

ಈ ಸಮಯದಿ ಎನ್ನಾಶೆ ನಿನ್ನೊಳು ಬಲು
ಸೂಸಿ ಹರಿಯುತಿಹುದು
ಕೂಸಿಗೆ ಜನನಿ ನಿರಾಶೆಗೊಳಿಸುವಳೆ
ದೋಷ ಕಳೆದು ವಿಟ್ಠಲೇಶ ಹೃದಯ ಬಾರೊ ।೫।

ರಾ ಗ – ಅ ಸಾ ವೇ ರಿ : ತಾ ಳ – ಏ ಕ ತಾ ಳ

ಎದ್ದು ಬರುತಾರೆ ನೋಡೆ ಗುರುಗಳು ತಾ–
ವೆದ್ದು ಬರುತಾರೆ ನೋಡೆ ।ಪ।



ಮುದ್ದು ಬೃಂದಾವನ ಮಧ್ಯದೊಳಗಿದ್ದು ।
ತಿದ್ದಿ ಹಚ್ಚಿದ ನಾಮ–ಮುದ್ರೆಗಳಿಂದೊಪ್ಪುತೀಗ ।ಅ ಪ।

ಗಳದೊಳು ಶ್ರೀತುಳಸಿ–ನಳಿನಾಕ್ಷಿ ಮಾಲೆಯು ।
ಚಲುವ ಮುಖದೊಳು–ಪೊಳೆವೊ ದಂತಗಳಿಂದ ।೧।

ಹೃದಯ ಸದನದಲ್ಲಿ ಪದುಮನಾಭನ ಭಜಿಸಿ
ಮುದಮನದಿಂದ ನಿತ್ಯ–ಸದಮಲ ರೂಪತಾಳಿ ।೨।

ದಾತ ಗುರುಜಗನ್ನಾಥವಿಟ್ಠಲನ್ನ
ಪ್ರೀತಿಯ ಬಡಿಸುತ ದೂತರ ಪೊರೆಯುತ ।೩।

ರಾ ಗ – ಹಿ ೦ ದೂ ಸ್ಥಾ ನಿ ಕಾ ಪಿ : ತಾ ಳ – ಆ ದಿ ತಾ ಳ

ಬಂದಾನು ರಾಘವೇಂದ್ರ, ಇಂದಿಲ್ಲಿಗೆ ।ಪ।

ಕಂದನ ಮೊರೆಕೇಳಿ ಜನನಿಯು ಬರುವಂತೆ ।ಅ ಪ।

ಗಜವೇರಿ ಬಂದ, ಜಗದಿ ತಾ ನಿಂದಾ ।
ಅಜಪಿತ ರಾಮನ, ಪದಾಬ್ಜ ಸ್ಮರಿಸುತಲಿ ।೧।

ಹರಿಯ ಕುಣಿಸುತ ಬಂದ, ನರಹರಿ ಪ್ರಿಯ ಬಂದಾ ।
ಶರಣಾಗತರನು ಕರವಪಿಡಿವೆನೆಂದು ।੨।

ಪ್ರಹ್ಲಾದ ವ್ಯಾಸಮುನೀಂದ್ರ, ರಾಘವೇಂದ್ರ ।
ನಿಲಿಸುತ ಮನವ ಮಧ್ವೇಶವಿಟ್ಠಲನಲ್ಲಿ ।೩।



ರಾಗ – ದೇಸ್ : ತಾಳ – ಆದಿ ತಾಳ

ರೋಗ ಹರನೆ ಕೃಪಾಸಾಗರ
ಶ್ರೀಗುರು ರಾಘವೇಂದ್ರ ಪರಿಪಾಲಿಸೊ ।ಪ।

ಸಂತತ ದುರ್ವಾದಿಧ್ವಾಂತ ದಿವಾಕರ
ಸಂತ ವಿನುತ ಮಾತ ಲಾಲಿಸೊ ।೧।

ಪಾವನಗಾತ್ರ ಸುದೇವವರ ತವ
ಸೇವಕರೊಳಗಾಡಿಸೊ ।೨।

ಘನ್ನಮಹಿಮ ಜಗನ್ನಾಥವಿಟ್ಠಲಪ್ರಿಯ
ನಿನ್ನಾರಾಧನೆ ಮಾಡಿಸೊ ।೩।



ಶ್ರೀ ಗುರುರಾಯರು – ಶ್ರೀಪಾದರಾಜರಮಠ – ಬೆಂಗಳೂರು

ರಾ ಗ – ಪೂ ರ್ವಿ : ತಾ ಳ – ಮ ಠ್ಯ ತಾ ಳ

ಯಾಕೆ ಮೂಕನಾದ್ಯೋ ಗುರುವೆ ನೀ
ಯಾಕೆ ಮೂಕನಾದ್ಯೋ ।ಪ।

ಯಾಕೆ ಮೂಕನಾದೆ ಲೋಕಪಾಲಕ ಎನ್ನ
ಸಾಕುವರ್ಯಾರಯ್ಯ ಶ್ರೀಕರ ರಾಘವೇಂದ್ರ ।ಅ ಪ।

ಹಿಂದಕ್ಕೆ ನೀ ಎನ್ನ ಮುಂದೆ ಸುಳಿದಾಡಿದೆ
ಮಂದಿಯೊಳಗೆ ಎನ್ನ ಮಂದನ್ನ ಮಾಡಿದ್ಯೊ ।೧।

ಬೇಕಾಗದಿದ್ದರಿನ್ನಾಕೆ ಕೈಯನು ಪಿಡಿದೆ
ಕಾಕುಜನರೊಳೆನ್ನ ನೂಕಿಬಿಟ್ಟು ನೀನು ।೨।

ಈಗ ಪಾಲಿಸದಿರೆ ಯೋಗಿಕುಲವರ್ಯ
ರಾಘವೇಂದ್ರನೆ ಭವ ಸಾಗುವದ್ಯಾಂಗಯ್ಯ ।೩।

www.vijayadasaru.net



ನಿನ್ನಂಥ ಕರುಣೆಲ್ಲ ಎನ್ನಂಥ ಕೃಪಣೆಲ್ಲ
ಘನ್ನಮಹಿಮ ನೀ ಎನ್ನನು ಬಿಟ್ಟೀಗ ।೪।

ಜನನಿಯು ನೀ ಎನ್ನ ಜನಕನಯ್ಯ
ಮನ್ನಿಸೊ ನೀ ನಿತ್ಯಾನನ್ಯ ಶರಣನೆ ।೫।

ಎಂದಿಗಾದರು ನಿನ್ನ ಪೊಂದಿಕೊಂಡವನೆಲೊ
ಇಂದು ನೀ ಕೈಬಿಟ್ಟರೆನ್ನ ಮುಂದೆ ಕಾಯುವರ್ಯಾರೊ ।೬।

ನಾಥನು ನೀ ಅನಾಥನು ನಾನಯ್ಯ
ಪಾತಕರರಿ ಜಗನ್ನಾಥವಿಟ್ಠಲದೂತ ।೭।

ರಾಗ – ಸೌರಾಷ್ಟ್ರ : ತಾಳ – ಆದಿತಾಳ

ಪೊಂದಿ ಬದುಕಿರೊ ರಾಘವೇಂದ್ರರಾಯರ
ಕುಂದದೆಮ್ಮನು ಕರುಣದಿಂದ ಪೊರೆವರ ।ಪ।

ನಂಬಿ ತುತಿಸುವ ಜನಕದಂಬಕಿಷ್ಟವ
ತುಂಬಿಕೊಡುವನು ಅನ್ಯರ ಹಂಬಲೀಯನು ।೧।

ಅಲವಬೋಧರ ಸುಮತ ಜಲಧಿಚಂದಿರ
ಒಲಿದು ಭಕ್ತರ ಕಾವ ಸುಲಭ ಸುಂದರ ।೨।

ಗುರುಸುಧೀಂದ್ರರ ವಿಮಲಕರಜರೆನಿಪರ
ಸ್ಮರಿಸಿ ಸುರುಚಿರ ಚರಣಯುಗಳ ಪುಷ್ಕರ ।೩।

ಫಾಲಲೋಚನ ವಿನುತ ಮೂಲರಾಮನ
ಶೀಲಸದ್ಗುಣ ತುತಿಪ ಶೀಲರನುದಿನ ।೪।

ಭೂತಭಾವನ ಜಗನ್ನಾಥವಿಟ್ಠಲನ
ಪ್ರೀತಿಪಾತ್ರನ ನಂಬಿರೀತನೀಕ್ಷಣ ।೫।



ಶ್ರೀ ರಾಯರು – ಪಲಿಮಾರು ಮಠ – ಬೆಂಗಳೂರು

ರಾ ಗ – ಯ ದು ಕು ಲ ಕಾ ೦ ಬೋ ದಿ : ತಾ ಳ – ಆ ದಿ ತಾ ಳ


ರಾಘವೇಂದ್ರ ಗುರುರಾಯರ ಸೇವಿಸಿರೊ ।
ಸೌಖ್ಯದಿ ಜೀವಿಸಿರೊ ।ಪ।

ತುಂಗಾತೀರದಿ ರಘುರಾಮನ ಪೂಜಿಪರೊ
ನರಸಿಂಗನ ಭಜಕರೊ ।ಅ ಪ।

ಶ್ರೀ ಸುಧೀಂದ್ರಕರ ಸರೋಜ ಸಂಜಾತ । ಜಗದೊಳಗೆ ಪುನೀತ ।
ದಾಶರಥಿಯ ದಾಸತ್ವವ ತಾ ವಹಿಸೀ । ದುರ್ಮತಗಳ ಜಯಿಸೀ ।
ಈ ಸಮೀರಮತ ಸಂಸ್ಥಾಪಕರಾಗೀ । ನಿಂದಕರನು ನೀಗೀ ।
ಭೂಸುರರಿಗೆ ಸಂಸೇವ್ಯ ಸದಾಚರಣೀ । ಕಂಗೊಳಿಸುವ ಕರುಣೀ ।೧।

ಕುಂದದೆ ವರ ಮಂತ್ರಾಲಯದಲ್ಲಿರುವ । ಕರೆದಲ್ಲಿಗೆ ಬರುವ ।
ಬೃಂದಾವನ ಗತ ಮೃತ್ತಿಕೆ ಜಲಪಾನ । ಮುಕ್ತಿಗೆ ಸೋಪಾನ ।
ಸಂದರುಶನ ಮಾತ್ರದಲಿ ಮಹತ್ಪಾಪ । ಬಡಿದೋಡಿಸಲಾಪ ।
ಮಂದಭಾಗ್ಯರಿಗೆ ದೊರೆಯದಿವರ ಸೇವ । ಶರಣರ ಸಂಜೀವ । ೨ ।

ಶ್ರೀದವಿಟ್ಠಲನ ಸನ್ನಿಧಾನ ಪಾತ್ರ । ಸಂಸ್ತುತಿಸಿದ ಮಾತ್ರ ।
ಮೋದಪಡಿಸುತಿಹ ತಾನಿಹಪರದಲ್ಲಿ । ಈತಗೆ ಸರಿಯೆಲ್ಲಿ ।
ಮೇದಿನಿಯೊಳಗಿನ್ನರಸಲು ನಾ ಕಾಣೆ । ಪುಸಿಯಲ್ಲೆನ್ನಾಣೆ ।
ಪಾದಸ್ಮರಣೆಯ ಮಾಡದವನೆ ಪಾಪಿ । ನಾ ಪೇಳುವೆ ಸ್ಥಾಪಿ । ೩ ।



ರಾಗ – ಧನ್ಯಾಶ್ರೀ : ತಾಳ – ಏಕತಾಳ

ಗುರು ರಾಘವೇಂದ್ರರ ಚರಣ ಕಮಲವನ್ನು
ಸ್ಮರಿಸುವ ಮನುಜರಿಗೆ । ಪ ।

ಕರೆಕರೆಗೊಳಿಸುವ ದುರಿತ ದುಷ್ಕೃತವೆಲ್ಲ
ಕರಿಯು ಕಂಡ ಸಿಂಹನ ತೆರನಾಗುವುದಯ್ಯ । ಅ ಪ ।

ಗುರುಮಧ್ವಮತವೆಂಬ ವರ ಕ್ಷೀರಾಂಬುಧಿಯಲ್ಲಿ
ಹರ ಧರಿಸಿದ ಶಶಿಯಂತುದಿಸಿ ಪರಮತ ತಿ-
ಮಿರಕ್ಕೆ ತರಣಿಕಿರಣನೆನೆಸಿ ಪಿರಿದು
ಮೆರೆವ ಸಿರಿರಾಮನರ್ಚಕರಾದ ।೧।

ಹರಿಯೆ ಸರ್ವೋತ್ತಮ ಸಿರಿಯು ಆತನ ರಾಣಿ
ಪರಮೇಷ್ಟಿ ಮರುತರೆ ಗುರುಗಳೆಂದು
ಗರುಡಶೇಷರುದ್ರ ಸಮರೆಂದು ಸ್ಥಾಪಿಸಿ
ಸ್ಥಿರ ತಾರತಮ್ಯ ಪಂಚಭೇದ ಸತ್ಯವೆಂಬ ।೨।

ಅಂಧಕರಿಗೆ ಚಕ್ಷು ವಂದ್ಯರಿಗೆ ಸುರತರು
ಬಂದಬಂದವರಭೀಷ್ಟಗಳನಿತ್ತು
ಒಂದಾರುನೂರುವತ್ಸರ ವೃಂದಾವನದಲ್ಲಿ
ಚೆಂದಾಗಿ ನಿಂದು ಮೆರೆವ ಕೃಪಾಸಿಂಧು ।೩।

ರಾ ಎನ್ನೆ ದುರಿತರಾಶಿಗಳ ದಹಿಸುವ
ಘ ಎನ್ನೆ ಘನಜ್ಞಾನ ಭಕುತಿ ಈವ
ವೇಂ ಎನ್ನೆ ವೇಗದಿ ಜನನಮರಣ ದೂರ
ದ್ರ ಎನ್ನೆ ದ್ರವಿಣಾರ್ಥ ಶ್ರುತಿ ಪ್ರತಿಪಾದ್ಯನ ಕಾಂಬ ।೪।

ವರ ತುಂಗಾತೀರ ಮಂತ್ರಾಲಯ ಪುರದಲ್ಲಿ
ಪರಿಪರಿ ಸೇವೆ ಭೂಸುರರಿಂದ ಕೊಳುತ
ಸಿರಿಯರಮಣ ನಮ್ಮ ಗೋಪಾಲವಿಟ್ಠಲನ
ಚರಣ ಸೇವಿಸುತಿಪ್ಪ ಗುರುಶಿಖಾಮಣಿಯಾದ ।೫।

ರಾಗ – ಕಲ್ಯಾಣಿ : ತಾಳ – ಆದಿತಾಳ

ವೃಂದಾವನ ನೋಡಿರೊ । ಗುರುಗಳ
ವೃಂದಾವನ ಪಾಡಿರೊ ।ಪ।



ಶ್ರೀ ಗುರುರಾಯರು – ಮಂತ್ರಾಲಯ

ವೃಂದಾವನ ನೋಡಿ ಆನಂದ ಮದವೇರಿ
ಚೆಂದದಿ ದ್ವಾದಶ ಪುಂಡ್ರಾಂಕಿತಗೊಂಬ ।ಅ ಪ।

ತುಂಗಭದ್ರಾ ನದಿಯ ತೀರದಲಿ । ಉ–
ತ್ತುಂಗ ಮಂಟಪದ ಮಧ್ಯದಿ
ಶೃಂಗಾರ ತುಳಸಿ ಶ್ರೀಪದ್ಮಾಕ್ಷಸರಗಳಿಂದ
ಮಂಗಳಕರ ಮಹಾ ಮಹಿಮೆಯಿಂದೊಪ್ಪುವ ।೧।

ದೇಶ ದೇಶದಿ ಮೆಚ್ಚುತ । ಇಲ್ಲಿಗೆ
ಬಂದು ವಾಸವಾಗಿ ಸೇವಿಪ ।
ಭಾಷೆ ಕೊಟ್ಟಂದದಿ ಬಹುವಿಧವರಗಳ
ಸೂಸುವ ವರಮಹಾ ಮಹಿಮೆಯಿಂದೊಪ್ಪುವ ।೨।

ನಿತ್ಯ ಸನ್ನಿಧಿ ಸೇವಿಪ । ಭಕ್ತರಿಗೆಲ್ಲ
ಮತ್ತೆ ಅಭೀಷ್ಟವ ಕೊಡುವ ।
ಸತ್ಯದಿ ಗುಣಸಿಂಧು ವೆಂಕಟವಿಟ್ಠಲನ
ನಿತ್ಯ ಸನ್ನಿಧಿಯಿಂದ ನಿರುತ ಪೂಜೆಯಗೊಂಬ ।೩।



ರಾ ಗ – ಪೂ ರ್ವಿ  :  ತಾ ಳ – ಆ ದಿ ತಾ ಳ

ರಥವಾನೇರಿದ ರಾಘವೇಂದ್ರ । ಸದ್ಗುಣಗಳ ಸಾಂದ್ರ । ಪ ।

ಸತುವ ಮಾರ್ಗದಿ ಸಂತತ ಸೇವಿಪರಿಗೆ । ಅತಿ
ಹಿತದಲಿ ಮನೋರಥವ ಕೊಡುವೆನೆಂದು । ಅ ಪ ।

ಚತುರ ದಿಕ್ಕು ವಿದಿಕ್ಕುಗಳಲ್ಲಿ । ಚರಿಪಾಜನರಲ್ಲಿ
ಮಿತಿಯಿಲ್ಲದೆ ಬಂದು ಓಲೈಸುತಲಿ । ವರವಾ ಬೇಡುತಲಿ
ನುತಿಸುತ ಪರಿಪರಿ ನತರಾಗಿಹರಿಗೆ
ಗತಿಪೇಳದೆ ಸರ್ವಥಾ ಬಿಡೆನೆಂದು । ೧ ।

ಅತುಳ ಮಹಿಮಾನಾ ದಿನದಲ್ಲಿ । ದಿತಿಜಾವಂಶದಲಿ
ಉತ್ಪತ್ತಿಯಾಗಿ ಉಚಿತಾದಲ್ಲಿ । ಉತ್ತಮ ಮತಿಯಲ್ಲಿ
ಅತಿಶಯವಿರುತಿರೆ ಪಿತನ ಬಾಧೆಗೆ ಮ–
ನ್ಮಥ ಪಿತನೊಲಿಸಿದ ಜಿತ ಕರುಣದಲಿ । ೨ ।

ಪ್ರಥಮ ಪ್ರಹ್ಲಾದ ವ್ಯಾಸಮುನಿಯೆ । ಯತಿರಾಘವೇಂದ್ರ
ಪತೀತರೋದ್ಧಾರಿಯೆ ಪಾವನಕಾರಿಯೇ । ಕರಮುಗಿವೆನು ಧೊರೆಯೆ
ಕ್ಷಿತಿಯೊಳು ಗೋಪಾಲವಿಟ್ಠಲನ ಸ್ಮರಿಸುತ
ಪ್ರತಿ ಮಂತ್ರಾಲಯದೊಳು ಅತಿ ಮೆರೆವ । ೩ ।

# ಶ್ರೀ ರಾ ಘ ವೇ ೦ ದ್ರ ಪ ೦ ಚ ಕ



ರಾ ಗ – ಶ ೦ ಕ ರಾ ಭ ರ ಣ : ತಾ ಳ – ಆ ದಿ ತಾ ಳ

ರಾಘವೇಂದ್ರ ಯತಿ ಸಾರ್ವಭೌಮ ದುರಿ–
ತಾಘ ದೂರ ತೇ ನಮೋ ನಮೋ
ಮಾಗಧರಿಪುಮತ ಸಾಗರಮೀನ
ಅಘವಿನಾಶನ ನಮೋ ನಮೋ
ಶ್ಲಾಘಿತಗುಣಗಣ ಸೂರಿಪ್ರಸಂಗ ಸ–
ದಾಗಮಜ್ಞ ತೇ ನಮೋ ನಮೋ
ಮೇಘಶ್ಯಾಮಲ ರಾಮಾರಾಧಕ ಅ–
ಮೋಘ ಬೋಧ ತೇ ನಮೋ ನಮೋ ।೧।

ತುಂಗಭದ್ರ ಸುತರಂಗಿಣೀತೀರಗ
ಮಂಗಳಚರಿತ ಶುಭಾಂಗ ನಮೋ
ಇಂಗಿತಜ್ಞ ಕಾಳಿಂಗಮಥನ ಯದು–
ಪುಂಗವ ಹೃದಯ ಸುಸಂಗ ನಮೋ

ಸಂಗಿರ ಚಿನ್ಹಿತ ಶೃಂಗಾರಾನನ
ತಿಂಗಳಕರುಣಾಪಾಂಗ ನಮೋ
ಗಾಂಗೇಯಾಸಮಭಂಗ ಕುಮತ ಮಾ-
ತಂಗ ಸಂಘ ಸಿತಾಪಾಂಗ ನಮೋ ।೨।

ಶ್ರೀಸುಧೀಂದ್ರಕರಜಾತ ನಮೋ ನಮೋ
ಭೂಸುರನುತ ವಿಖ್ಯಾತ ನಮೋ
ದೇಶಿಕವರ ಸಂಸೇವ್ಯ ನಮೋ ನಮೋ
ದೋಷವಿವರ್ಜಿತ ಕಾವ್ಯ ನಮೋ
ಕ್ಲೇಶಿತಜನ ಪರಿಪಾಲ ನಮೋ ನಮೋ
ಭಾಸಿತ ಕರುಣಾಶೀಲ ನಮೋ
ವ್ಯಾಸ ರಾಮಪದ ಭಕ್ತ ನಮೋ ನಮೋ
ಶಾಶ್ವತ ಧರ್ಮಾಸಕ್ತ ನಮೋ ।೩।

ಕೋವಿದ ಮಸ್ತಕ ಶೋಭಿತಮಣಿ ಸಂ-
ಭಾವಿತ ಸುಮಹಿಮ ಪಾಲಯಮಾಂ
ಸೇವಾಪರ ಸರ್ವಾರ್ಥಪ್ರದ ವೃಂ-
ದಾವನ ಮಂದಿರ ಪಾಲಯಮಾಂ
ಭಾವಜಮಾರ್ಗಣ ಭುಜಗವಿನಾಯಕ
ಭಾವಜ್ಞ ಪ್ರಿಯ ಪಾಲಯಮಾಂ
ಕೇವಲ ನತಜನ ಪಾವನರೂಪ ಸ-
ದಾವಿನೋದಿ ಹೇ ಪಾಲಯಮಾಂ ।೪।

ಸನ್ನುತಮಹಿಮ ಜಗನ್ನಾಥವಿಟ್ಠಲ
ಸನ್ನಿಹಿತ ಸುಮಾನಸ ಜಯಜಯ ಭೋ
ಚಿನ್ಹಿತ ದಂಡಕಮಂಡಲಪುಂಡ್ರ ಪ್ರ
ಪನ್ನ ಭಯಾಪಹ ಜಯಜಯ ಭೋ
ಮಾನ್ಯ ಮಹಾತ್ಮ ಪ್ರಸನ್ನವದನ ಕಾ-
ರುಣ್ಯ ಪಯೋನಿಧೆ ಜಯಜಯ ಭೋ
ಧನ್ಯ ಕ್ಷಮಾಸಂಪನ್ನ ಧರಾಮರಾ ಶ-
ರಣ್ಯ ಸದಾರ್ಚಿತ ಜಯಜಯ ಭೋ ।೫।




ರಾ ಗ – ಭೈ ರ ವಿ : ತಾ ಳ – ಅ ಟ ತಾ ಳ

ನಮಿಸಿ ಬೇಡುವೆ ವರಗಳ ನಿನ್ನ ಸಂ–
ಯಮಿ ಕುಲೋತ್ತಮ ರಾಘವೇಂದ್ರ ರನ್ನ ।ಪ।

ವಿಮಲ ಸುಮತಿ ಜನರತಿ ಪ್ರೀಯಾ ।ಪಾದ।
ಕಮಲಗಳಿಗೆರಗುವೆನು ಜೀಯಾ।
ಶಮಲ ಮಾರ್ಗದಲಿ ಮತಿಯ ನೀಡದಿರೋ।
ಅಮಿತ ಕರುಣದಿ ಪಿಡಿಯೊ ಕೈಯ್ಯಾ ।೧।

ಕಂಡವರ ಬೇಡಿ ನೊಂದೆ । ಕ –।
ಮಂಡಲಾದಂಡ ಧಾರಿ ನೀನೆಗತಿ ಎಂದೇ।
ಪಂಡಿತಾಗ್ರ ಗಣ್ಯ ಇನ್ನಾದರು ಮುಂದೇ। ಕೋ –
ದಂಡ ಪಾಣಿ ಪಾದವಾ ತೋರಿಸೊ ತಂದೆ। ।೨।

ಶ್ರೀ ಸುಧೀಂದ್ರ ಯತಿಕರ ಸಂಜಾತಾ। ತುಂ –
ಗಾ ಸೂನದಿ ನಿಲಯಾಘಾಂಬುಧಿ ಪೋತಾ।
ವಾಸುಕಿ ಶಯನಾ ಗುರು, ಜಗನ್ನಾಥವಿಟ್ಠಲನ
ದಾಸರಾ ಪೋಷಕ ಲಾಲಿಸೆನ್ನಮಾತಾ। ।೩।

www.vijayadasaru.net








ರಾ ಗ – ಧ ನ್ಯಾ ಸಿ : ತಾ ಳ – ಝಂ ಪೆ ತಾ ಳ

ನೋಡಲೆ ಮನವೆ ಕೊಂಡಾಡು ಗುರುಗಳ ಪಾದ
ಈಡು ಇಲ್ಲವೊ ಪುಣ್ಯಕೆ ।ಪ।

ನಾಡೊಳಗೆ ಗುರುರಾಘವೇಂದ್ರರಾಯರ ಸೇವೆ
ಮಾಡಿದವ ಪರಮಧನ್ಯ – ಮಾನ್ಯ ।ಅ ಪ।

ನಿಷ್ಠೆಯಿಂದಲಿ ಸ್ಮರಿಸೆ ಕಷ್ಟಗಳು ದೂರ ಮನೋ
ಭೀಷ್ಟಗಳ ಪೂರೈಪರೊ
ದೃಷ್ಟಿಯಿಂದಲಿ ನೋಡಲನೇಕ ಜನ್ಮದ ಪಾಪವು
ಸುಟ್ಟು ಪೋಪವು ಕ್ಷಣದಲಿ
ಅಷ್ಟ ಸೌಭಾಗ್ಯವನು ಕೊಟ್ಟು ಸುಜನರಿಗೆ ಶ್ರೀ
ವಿಷ್ಣುದಾಸ್ಯವ ತೋರ್ಪರೋ
ಎಷ್ಟು ಹೇಳಲಿ ಇವರ ನಿಷ್ಠೆ ಮಹಾತ್ಮ್ಯೆಯನು
ದುಷ್ಟರಿಗೆ ದೊರೆಯದಿವರ ಸೇವಾ – ಭಾವಾ ।೧।

ಹಲವು ಕ್ಷೇತ್ರಗಳ್ಯಾಕೆ ಹಲವು ತೀರ್ಥಗಳ್ಯಾಕೆ
ಫಲ ಸುಲಭದಲ್ಲೆ ಇರಲು
ಬಲವು ಇದ್ದದರೊಳಗೆ ಪ್ರದಕ್ಷಿಣೆ ಸುಪಾದಜಲ
ತಲೆಯಲಿ ಧರಿಸಿ ನಿತ್ಯಾ
ಮಲರಹಿತನು ಆಗಿ ದಂಡಪ್ರಣಾಮವ ಮಾಡೆ
ಒಲಿವ ಕರುಣದಲಿ ಬೇಗ
ಜಲಜನಾಭನು ನಾಲ್ಕು ರೂಪದಿಂದಿವರಲ್ಲಿ
ಸಿಲುಕಿ ಪೂಜೆಗೊಂಬನು ಸತತ – ಮೋಕ್ಷದಾತ ।೨।

ಹರಿದಾಸರಿದ್ದ ಸ್ಥಳ ವರಕಾಶಿ ಮೊದಲಾದ
ಉರುಕ್ಷೇತ್ರಕ್ಕಿಂತಧಿಕವೊ
ಸುರ ಋಷಿ ಮುನಿಗಳು ಇಲ್ಲಿಹರು ವೈಕುಂಠ
ಸರಿ ಮಿಗಿಲು ಎಂದೆನಿಪುದೊ
ಪರಮ ಸುಜ್ಞಾನಿಗಳಿಗೀ ಫಲವು ದೊರಕುವುದು
ತರತಮದಿ ಇತರ ಜನಕೆ
ಗುರುಶ್ರೀಶವಿಟ್ಠಲನು ಇವರ ರೂಪನಾಮದಲಿ
ಪರಿಪರಿ ವರವಗರೆವ – ಪೊರೆವಾ ।೩।



ತುಂಗಾತೀರದ ಶ್ರೀ ರಾಯರು – ಬಿಚ್ಚಾಲೆ ಗ್ರಾಮ

ರಾ ಗ – ಮೋ ಹ ನ : ತಾ ಳ – ರೂ ಪ ಕ ತಾ ಳ

ತುಂಗಾತೀರದಿ ನಿಂತ ಸುಯತಿವರನ್ಯಾರೇ ಪೇಳಮ್ಮಯ್ಯ । ಪ ।

ಸಂಗೀತಪ್ರಿಯ ಮಂಗಳ ಸುಗುಣತರಂಗ ಮುನಿಕುಲೋತ್ತುಂಗ ಕಾಣಮ್ಮ । ಅ ಪ ।

ಚೆಲುವ ಸುಮುಖ ಫಣೆಯಲ್ಲಿ ತಿಲಕ ನಾಮಗಳು ನೋಡಮ್ಮಯ್ಯ
ಜಲಜಮಣಿಯು ಕೊರಳಲ್ಲಿ ತುಲಸಿ ಮಾಲೆಗಳು ನೋಡಮ್ಮಯ್ಯ
ಸುಲಲಿತ ಕಮಂಡಲು ದಂಡವನ್ನು ಧರಿಸಿಹನೇ ನೋಡಮ್ಮಯ್ಯ
ಕ್ಷುಲ್ಲ ಹಿರಣ್ಯಕನಲ್ಲಿ ಜನಸಿದ ಪ್ರಹ್ಲಾದನು ತಾನಿಲ್ಲಿಹನಮ್ಮ । ೧ ।

ಸುಂದರ ಚರಣಾರವಿಂದಕೆ ಸುಭಕುತಿಯಲಿಂದ ನೋಡಮ್ಮಯ್ಯ
ವಂದಿಸಿ ಸ್ತುತಿಸುವ ಭೂಸುರರ ವೃಂದ ನೋಡಮ್ಮಯ್ಯ
ಛಂದದಲಂಕೃತಿಯಿಂದ ಶೋಭಿಸುವಾನಂದ ನೋಡಮ್ಮಯ್ಯ
ಹಿಂದೆ ವ್ಯಾಸಮುನಿಯೆಂದೆನಿಸಿದ ಕರ್ಮಂದಿಗಳರಸಘದಿಂದ ರಹಿತನೆ । ೨ ।

ಅಭಿನವಜನಾರ್ದನವಿಟ್ಠಲನ ಧ್ಯಾನಿಸುವ ನೋಡಮ್ಮಯ್ಯ
ಅಭಿವಂದಿಸಿದವರಿಗೆ ಅಖಿಲಾರ್ಥವ ಸಲ್ಲಿಸುವ ನೋಡಮ್ಮಯ್ಯ
ನಭಮಣಿಯಂದದಿ ವಿವಿಧದಿ ಶೋಭಿಸುವ ನೋಡಮ್ಮಯ್ಯ
ಶುಭಗುಣಗಣನಿಧಿ ರಾಘವೇಂದ್ರಗುರು ಅಭುಜಬವಾಂಡದಿ ಪ್ರಬಲ ಕಾಣಮ್ಮ । ೩ ।

## ಶ್ರೀ ರ ಘೂ ತ್ತ ಮ ತೀ ರ್ಥಾ ಯ ನ ಮಃ



ಶ್ರೀ ರಘೂತ್ತಮತೀರ್ಥರು – ತಿರುಕೊಯಿಲೂರು

ಭಾವಬೋಧ ಕೃತಂ ಸೇವೆ ರಘೂತ್ತಮ ಮಹಾಗುರುಂ ।
ಯತ್ ಶಿಷ್ಯ ಶೀಷ್ಯ ಶೀಷ್ಯಾದ್ಯಾಃ ಟಿಪ್ಪಣ್ಯಾಚಾರ್ಯ ಸಂಜ್ಞಿತಾ ॥

ಯಾರ ಶಿಷ್ಯ, ಪ್ರಶಿಷ್ಯರೇ ಮೊದಲಾದವರೂ ಕೂಡ ಟಿಪ್ಪಣಾ–ಚಾರ್ಯರೆಂದು ಪ್ರಸಿದ್ಧರಾಗಿರುವರೊ ಅಂತಹ ಮಹಾಮಹಿಮರಾದ, ಭಾವಬೋಧ ಟಿಪ್ಪಣಿಗಳನ್ನು ರಚಿಸಿರುವ, ರಘೂತ್ತಮತೀರ್ಥರನ್ನು ಆಶ್ರಯಿಸುತ್ತೇನೆ.

ಪ್ರಣಮತ್ಕಾಮಧೇನೂಂ ಚ ಭಜತ್ಸುರತರೂಪಮಮ್ ।
ಶ್ರೀ ಭಾವಬೋಧ ಕೃತ್ಪಾದ ಚಿಂತಾಮಣಿಮುಪಾಸ್ಮಹೇ ॥

ನಮಿಸುವವರಿಗೆ ಕಾಮಧೇನುಗಳಾದ, ಭಜಿಸುವವರಿಗೆ ಕಲ್ಪವೃಕ್ಷ–ರಾದ, ಆಚಾರ್ಯ ಭಾವನೆಗಳನ್ನು ತಿಳಿದು ವಿಶದವಾದ ಟಿಪ್ಪಣಿಗಳನ್ನು ರಚಿಸಿದ, ಚಿಂತಾಮಣಿಯಂತಿರುವ, ರಘೂತ್ತಮತೀರ್ಥರನ್ನು ಉಪಾಸಿಸುವೆ.

( ಆ ರಾ ಧ ನೆ : ಪು ಷ್ಯ ಮಾ ಸ ಶು ಕ್ಲ ಪ ಕ್ಷ ದ್ವಾ ದ ಶಿ )

ರಾ ಗ – ಭೈ ರ ವಿ : ತಾ ಳ – ಅ ಟ ತಾ ಳ

ನೋಡಿದೆ । ಗುರುಗಳ ನೋಡಿದೆ । ಪ ।

ನೋಡಿದೆನು ಗುರುಗಳ ಪದಾಬ್ಜವ । ಪಾಡಿದೆನು ತನ್ಮಹಿಮೆಗಳ ನಾ
ಬೇಡಿದೆನು ಮನದಣಿಯೆ ವರಗಳ ಈಡು ಇಲ್ಲದೆ ಕೊಡುವ ಪ್ರಭುಗಳ । ಅ ಪ ।

ಪಂಚಕೃಷ್ಣಾರಣ್ಯಕ್ಷೇತ್ರ ಪಿನಾಕಿನಿಯ ತೀರದಲಿ ನಿಂತು ।
ಮಿಂಚುತಿಹ ಕಾಷಾಯದಂಡಕಮಂಡಲವ ಧರಿಸುತ್ತ ಧರೆಯೊಳು ॥
ಪಂಚಬಾಣನ ಪಿತನ ಗುಣಗಳ ಅಂಚೆಯದೆ ಪೊಗುಳುತ್ತ ಹರುಷದಿ ।
ಸಂಚಿತಾಗಾಮಿಗಳ ಕಳೆದು ಪ್ರಪಂಚದಲಿ ಮೆರೆವಂಥ ಗುರುಗಳ । ೧ ।

ಅಲವಬೋಧರ ಭಾಷ್ಯಟೀಕಾಭಾವವನು ಸುಜನರಿಗೆ ಬೋಧಿಸಿ
ಕಲುಷಮತಗಿರಿ ಸಮುದಯಂಗಳ ಕುಲಿಶದಂದದಿ ಖಂಡಿಸುತಲಿ ॥
ಮೂಲರಾಮ ದಿಗ್ವಿಜಯರಾಮರ ಪಾದಕಮಲಕೆ ಭೃಂಗರೆನಿಸುತ ।
ಶೀಲಭಕ್ತಿ ವಿರಕ್ತಿ ಮತಿಗಳ ಪಾಲಿಸುವ ಯತಿಮೌಳಿರತುನವ । ೨ ।

ಕಾಮಧೇನು ಸುಕಲ್ಪತರು ಚಿಂತಾಮಣಿಯವೋಲ್ ಕಾಮಿತಾರ್ಥವ ।
ಪ್ರೇಮದಲಿ ಬೀರುತ್ತ ಆಧ್ಯಾತ್ಮಾದಿ ತಾಪತ್ರಯವ ಕಳೆಯುವ ॥
ಸ್ವಾಮಿ ಶ್ರೀಹರಿ ಶ್ರೀದವಿಟ್ಠಲನ ದಾಸರಗ್ರಣಿಯೆನಿಸಿ ಮೆರೆಯುವ ।
ನೇಮದಿಂದಲಿ ಶ್ರೀರಘೂತ್ತಮ ಮೌನಿವರ್ಯರ ಕರುಣ ಬಯಸುತ । ೩ ।

ರಾ ಗ – ಹಿ ಂ ದೋ ಳ : ತಾ ಳ – ಆ ದಿ ತಾ ಳ

ಪಾಹಿ ರಘೂತ್ತಮ ಗುರುರಾಯ ವಿ
ದ್ಯಾಯು ಯಶಶ್ರೀ ವಿಜ್ಞಾನಪ್ರದಾಯ । ಪ ।

ಪಾಹಿ ಪ್ರಮೋದಾಗಮಾನಂದಿತಾಯ । ದಿಗಧಿಪಾಯ ।
ಗುಣಸಾಗರಾಯ । ಬುಧಗೇಯ । ಅಜೇಯ । ಅ ಪ ।

ರಘುವರ್ಯ ಪಾದಾಬ್ಜ ಮಧುಲಿಡ್ವರ ।
ಅಘಶೈಲ ಮಘವಾನನಘಧೀವರ ।
ನಿಗಮಾಗಮಾನಂತೋದಿತ ಭಾಸ್ಕರ ॥
ರಘುವರಾಬ್ಜ ಪದಯುಗಳೇಂದೀವರ
ನಿಗದಿತಾಶುಗಾಶಯ ನಿಶ್ರೇಯ ।೧।

ನತಕಲ್ಪದ್ರುಮ ಸಿದ್ಧ ನಿಕಶಾತ್ಮಜ ।
ಶಿತಿಕಂಠಯುತನೀತ ವಾತಾತ್ಮಜ ।
ಯತಿವರ್ಯಾನ್ವಿತ ತತ್ವಕ್ರತು ಋತ್ವಿಜ ॥
ಕ್ಷಿತ್ಯಮೃತಾಂಧಸಸತ್ತಮ ದಕ್ಷಿಣ ।
ಚಿತ್ರಜಾರಿಧುನಿ ನಿತ್ಯವಿಹಾರಿ ।೨।

ನಿರವದ್ಯ ಸುಖಭಾವಭೋದಾತ್ಮಕ ।
ಸಿರಿತಂದೆ ವೆಂಕಟೇಶವಿಟ್ಠಲಾರ್ಚಕ ।
ಸ್ಮರ ಸಂವತ್ಸರ ಪುಷ್ಯ ಶುಕ್ಲಾಧಿಕ ॥
ಸ್ವರ್ದಿನಾಭ್ರಪುರ ನಿರ್ಗಮನೋತ್ಸುಕ
ದುರ್ಗಮ ಭವ ಸಂಸರ್ಗವಿದಾರಕ ।೩।

**ಶ್ರೀ ವಿ ಜ ಯೀ ಂ ದ್ರ ತೀ ರ್ಥ ಗು ರು ಭ್ಯೋ ನ ಮಃ**



ಶ್ರೀ ಅಜಯ್ಯ ವಿಜಯೀಂದ್ರರು – ಕುಂಭಕೋಣಮ್

www.vijayadasaru.net



ಭಕ್ತಾನಾಂ ಮಾನಸಾಂಭೋಜ ಭಾನವೇ ಕಾಮಧೇನವೇ ।
ನಮತಾಂ ಕಲ್ಪತರವೇ ಜಯೀಂದ್ರ ಗುರವೇ ನಮಃ ॥

ಭಕ್ತರ ಮನಸ್ಸೆಂಬ ಕಮಲಗಳನ್ನು ಅರಳಿಸುವ ಸೂರ್ಯ–ನಂತಿರುವ, ನಮಿಸುವವರಿಗೆ ಕಾಮಧೇನುವೂ, ಕಲ್ಪವೃಕ್ಷವೂ ಆದ ವಿಜಯೀಂದ್ರತೀರ್ಥರಿಗೆ ನಮನಗಳು.

( ಆ ರಾ ಧ ನೆ : ಜೇ ಷ್ಠ ಮಾ ಸ ಕೃ ಷ್ಣ ಪ ಕ್ಷ ತ್ರ ಯೋ ದ ಶಿ )



ಶ್ರೀ ಅಜಯ್ಯ ವಿಜಯೀಂದ್ರರು – ಕುಂಭಕೋಣಮ್

ರಾ ಗ – ಶ ಂ ಕ ರಾ ಭ ರ ಣ : ತಾ ಳ – ಆ ದಿ ತಾ ಳ

ವಿಜಯೀಂದ್ರ ಮುನೀಂದ್ರರೆಂಬಾಶ್ಚರ್ಯದ
ಗಜೇಂದ್ರ ಬಂದದೆ ಸುಜನರು ನೋಡ ಬನ್ನಿ ।ಪ।

ಕಲುಷವೆಂಬ ಪಂಕವನೀಡ್ಯಾಡಿ । ವಿ–
ಮಲ ಹರಿಪದ ತೀರ್ಥದ ಜಲಪಾನ ಮಾಡಿ
ಸಲೆ ಗುರುಮಧ್ವ ಮತಾಂಬುಧಿಯೊಳು
ನಲಿನಲಿದು ಕುಣಿದಾಡುತಲೀ ।೧।

ರಮೇಶನ ಧ್ಯಾನವೆಂಬ ಮದವೇರಿ
ಮಮತೆಯೆಂಬ ಕದಳಿ ಕಿತ್ತೀಡಾಡಿ
ವಿಮಲ ಶ್ರೀಹರಿಪದರಜ ಶಿರದಿ ಧರಿಸಿ
ಕುಮತಗಳೆಂಬ ತರುಗಳ ಮುರಿಯುತಲೀ ।೨।

ಗುರು ಸುರೇಂದ್ರತೀರಥರೆಂಬ
ವರಮಾವಟಿಗನ ಆಜ್ಞೆಯೊಳಿದ್ದು
ಗುರುಪುರಂದರವಿಟ್ಠಲನ ಭಕ್ತಿಯೆಂಬ
ಸರಪಣಿಯೊಳು ನಲಿನಲಿದಾಡುತಲೀ ।೩।



ಶ್ರೀ ಅಜಯ್ಯ ವಿಜಯೀಂದ್ರರು – ಕುಂಭಕೋಣಮ್

ರಾಗ – ಹಂಸಧ್ವನಿ : ತಾಳ – ಆದಿತಾಳ

ವಿಜಯೀಂದ್ರ ಯತಿಯ ನಾ ಕಂಡೆ । ಮುದಗೊಂಡೆ ।ಪ।

ವಿಜಯ ಡಂಗುರ ಹೊಯಿಸಿ ಗಜವೇರಿ ಬರುತಿಪ್ಪ ।ಅ ಪ।

ನಿಜದಿ ಲಿಂಗಣ್ಣನ ಗೆಲಿದು । ಮತವನು ಪಡೆದು ।
ಸುಜನರ ಭಯ ಪರಿಹರಿಸುತ ಮೆರೆಯುವ ।೧।


ಹರಿಯೇ ಪರನೆಂಬುವ ಸರ್ವ ಶಾಸ್ತ್ರ ಕೋವಿದನ
ಧರಣೇಶನುತ ವ್ಯಾಸಮುನಿಯ ವಿದ್ಯಾಸುತನ ।೨।

ಸುಖಮುನಿಯಾಸ್ಥಾನ ರಾಜನ ವರತೇಜನ
ಅಕಳಂಕ ಮಹಿಮಾಸಿರಿ ಸುರೇಂದ್ರನ ಕುವರನ ।೩।

ಚಾಷಷ್ಟಿ ಕಲೆಗಳರಿತವನ ಮಾಯಿಭೀಕರನ
ಶ್ರೀಶ ಗುರುಪುರಂದರವಿಟ್ಠಲನ್ನ ಭಜಿಪನ್ನ ।೪।

**ಭಾವೀ ಸಮೀರ**

**ಶ್ರೀ ಮ ದ್ ವಾ ದಿ ರಾ ಜ ಗು ರು ಭ್ಯೋ ನ ಮಃ**



ಪಂಚವೃಂದಾವನ – ಸೋಂದಾ ಕ್ಷೇತ್ರ

ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟ ಫಲಪ್ರದಾ ।
ತಥಾ ಕಲೌ ವಾದಿರಾಜ ಶ್ರೀಪಾದೋಭೀಽಷ್ಟದಃ ಸತಾಂ ॥

ಕಾಮಧೇನುವು ಹಿಂದೆ ಎಲ್ಲಾ ಅಭೀಷ್ಟಗಳನ್ನು ಕೊಡುತ್ತಿತ್ತು. ಅದರಂತೆ ಈ ಕಲಿಕಾಲದಲ್ಲಿ ಸಜ್ಜನರಿಗೆ ಅಭೀಷ್ಟಗಳನ್ನು ನೀಡುತ್ತಿರುವವರು ವಾದಿರಾಜಶ್ರೀಪಾದರು.

ತಪೋ ವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ ।
ವಾದಿರಾಜ ಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್ ॥

ತಪಸ್ಸು, ವಿದ್ಯೆ, ವಿರಕ್ತಿ, ಮೊದಲಾದ ಸದ್ಗುಣಗಳ ಖನಿಯೇ ವಾದಿರಾಜರು. ಹಯಗ್ರೀವದೇವರ ದಯೆಗೆ ಪಾತ್ರರಾದ ಆ ವಾದಿರಾಜ ಗುರುಗಳಿಗೆ ನನ್ನ ವಂದನೆಗಳು.

( ಆ ರಾ ಧ ನೆ : ಫಾ ಲ್ಗು ಣ ಮಾ ಸ ಕೃ ಷ್ಣ ಪ ಕ್ಷ ತೃ ತೀ ಯ )



ಶ್ರೀ ಕ ಮ ಲಾ ಪ ತಿ ದಾ ಸ ಕೃ ತ

ಒಂದು ಕ್ಷಣದಲಿ ವಾದಿರಾಜರ
ದ್ವಂದ್ವ ಪದವನು ಭಜಿಸುವವರಿಗೆ
ಬೆಂದು ಪೋಗ್ವುದು ಪೂರ್ವಜನ್ಮದ ದುರಿತ ಕಾನನವು । ಈ

ಮಂದಮತಿಗಳು ಬಲ್ಲರೇ ಗೋ–
ವಿಂದ ಭಕ್ತರ ಮಹಿಮೆಯನು
ಪುರಂದರಾದಿಗಳರಿವರಲ್ಲದೆ ಮಿಕ್ಕವರರಿಯಲಹುದೇ ॥

(ಶ್ರೀ ಹರಿಕಥಾಸಾರಾಮೃತಸಾರ ಮಹಾತ್ಮೆ ಸಂಧಿ)



ರಾ ಗ – ಸು ರ ಟಿ : ತಾ ಳ – ಆ ದಿ ತಾ ಳ

ವಾದಿರಾಜ ಮುನಿಪ । ಹಯಮುಖ ।
ಪಾದ ಕಮಲ ಮಧುಪ । ಪ ।

ನೀ ದಯದಲಿ ತವ ಪಾದ ಧ್ಯಾನವನು
ಆದರದಲಿ ಕೊಟ್ಟಾದರಿಸೆನ್ನನು । ಅ ಪ ।

ಮೂಷಕ ಬಿಲದಿಂದ ಉದರ
ಪೋಷಕೆ ಬರಲೆಂದು
ವಾಸುಕಿ ಭಯದಿ ನಿನ್ನಾಸನದಿ ಬರೆ
ಕ್ಲೇಶ ಕಳೆದು ಸಂತೋಷವ ಗೈಸಿದೆ । ೧ ।

ಮುಂದೆ ಭೂತವರನ ಪ್ರೇರಿಸಿ
ಹಿಂದೆ ಒಬ್ಬ ನರನಾ
ನಿಂದರಿಸಿದೆ ಆನಂದದಿಂದ ಜನ
ವೃಂದ ನೋಡುತಿರೆ ಅಂದಣ ನಡಿಸಿದ್ಯೊ ।೨।


ಕ್ಷಿತಿಯೊಳು ಸತಿ ತನ್ನಾ ವಲ್ಲಭ
ಮೃತಿಯೈದಿರೆ ಮುನ್ನಾ
ಅತಿ ಶೋಕದಿ ಬಂದು ನುತಿಸಲು ಆ
ಪತಿಯನು ಬದುಕಿಸಿ ಹಿತದಿ ರಕ್ಷಿಸಿದೆ ।೩।

ನರಪತಿ ವ್ಯಾಧಿಯಲಿ ಬಳಲ್ವುದ
ತ್ವರಿತದಿ ನೀ ಕೇಳಿ
ಹರುಷದಿ ವ್ಯಾಧಿಯ ಪರಿಹರಿಸ್ಯವನಿಗೆ
ಹರುಷದಿಂದಲಭಯವ ತೋರಿದೆ ।೪।

ಶಾಸ್ತ್ರಪ್ರಸಂಗದಲಿ ನಾರಾಯಣ–
ಭೂತನ ಗೆಲಿದಲ್ಲಿ
ಖ್ಯಾತಿಯಿಂದ ಬಹುಮಾತನಾಡಿ ಶ್ರೀ–
ನಾಥನ ಮಂದಿರ ಪ್ರೀತಿಲಿ ತರಿಸಿದೆ ।೫।

ತುರಗವದನ ಪಾದ ಭುಜದಲಿ
ಧರಿಸಿಕೊಂಡ ಮೋದ
ವರಕಡಲೆಯ ಮಡ್ಡಿಯನು ಕರದಿಂ
ಧರಿಸಿ ಉಣಿಸಿದೆ ಗುರುವರ ಶುಭಕರ ।೬।

ಆ ಮಹಾ ಗೋಪಾಲವಿಟ್ಠಲನ
ಪ್ರೇಮ ಪೂರ್ಣ ಪಾತ್ರ
ಧೀಮಂತರಿಗೆ ಸುಕಾಮಿತಾರ್ಥಗಳ
ನೇಮದಿಂದೀಯುವ ಪಾವನ ಚರಿತ ।೭।



ರಾ ಗ – ನಾ ಟಿ : ತಾ ಳ – ತ್ರಿ ಪು ಟ ತಾ ಳ

ಶರಣು ಶರಣು ಶರಣಯ್ಯ ಶರಣು ।ಪ।

ಶ್ರೀ ಗುರು ವಾದಿರಾಜಗೆ
ಶರಣು ಸುರಗಣ ಮಾನ್ಯಗೆ
ಶರಣು ಶರಣರ ಪೊರೆವ ಕರುಣಿಗೆ
ಶರಣು ಹರಿಗುಣಲೋಲಗೆ ।ಅ ಪ।

ಮಧ್ವಮತ ಶುಭವಾರ್ಧಿಚಂದ್ರಗೆ
ಸಿದ್ಧಸಾಧನ ಮೂರ್ತಿಗೆ
ಬದ್ಧ ಶ್ರೀಹರಿದ್ವೇಷ ಮಾಯ್ಗಳ
ಗೆದ್ದ ಹಯಮುಖ ದಾಸಗೆ ।೧।

ನಿತ್ಯ ನಿರ್ಮಲ ನಿಗಮಸ್ತೋತ್ರಗೆ
ಭೃತ್ಯ ಪಾಲಕ ಸುಗುಣ ಗಾತ್ರಗೆ
ಸತ್ಯಲೋಕ ಸುಮುಖ್ಯ ಪಾತ್ರಗೆ
ಸ್ತುತ್ಯಯತಿವರ ಸುಜನ ಮಿತ್ರಗೆ ।೨।

ಮೋದದಾಯಕ ಭೇದ ಸಾಧಕ
ಸೋದೆ ಕ್ಷೇತ್ರಾಧೀಶಗೆ
ವೇದವೇದ್ಯ ಯತೀಶ ತಾತಗೆ
ಆದಿ ಗುರುಜಗನ್ನಾಥವಿಟ್ಠಲಗೆ ।೩।



ರಾಗ – ಹಂಸನಂದಿನಿ : ತಾಳ – ಛಾಪು ತಾಳ

ಜನ್ಮ ಸಫಲ ಕಾಣಿರೊ
ನಮ್ಮ ಗುರು ವಾದಿರಾಜರಾಯರ ಕಂಡು ।ಪ।

ಯುಕ್ತಿಮಲ್ಲಿಕೆಯೆಂಬ ಗ್ರಂಥ ಮಾಡಿಹರು
ಮತ್ತೆ ಮುತ್ತಿನ ಸಿಂಹಾಸನವನೇರಿಹರು
ಮತ್ತದುರ್ವಾದೀಭಗಳಿಗೆ ಮೃಗೇಂದ್ರರು
ಸೂತ್ರನಾಮದಿ ಮುಂದೆ ಮೆರೆವರು ।೧।

ವ್ಯಾಸ ಕೂಟಗಳಲ್ಲಿ ಶ್ರೇಷ್ಠರಾಗಿಹರು
ದಾಸ ಕೂಟಗಳಲ್ಲಿ ರತ್ನದಂತಿಹರು
ಭೂಸುರ ಕಾಯದಿ ನೂರಿಪ್ಪತ್ತು
ವರ್ಷ ಧರೆಯೊಳಗೆ ಮೆರೆದವರು ।೨।

ಮೂಜಗದೊಳಗಿಂಥ ಗುರುಗಳೆಲ್ಲಿಹರು
ಕಂಜಸುತನ ಪದವೇರುವರು
ರಾಜೇಶಹಯಮುಖನ ಕಿಂಕರಾಗ್ರಣಿಗಳು
ರಾಜಿಪ ಶ್ರೀಸೋದೆಪುರದಲಿಹರು ।೩।



ರಾ ಗ – ಭೈ ರ ವಿ : ತಾ ಳ – ಅ ಟ ತಾ ಳ

ಕಂಡೆ ಕಂಡೆ ರಾಜರ ಕಂಡೆ ಕಂಡೆ ।ಪ।

ಕಂಡೆ ಕಂಡೆನು ಕರುಣ ನಿಧಿಯನು
ಕರಗಳಂಜಲಿ ಮಾಡಿ ಮುಗಿವೆನು
ಲಂಡೆ ಮಾಯಿಗಳ ಗುಂಡಿ ಒಡೆಯಲು–
ದ್ದಂಡ ಮಾರುತಿ ಪದಕೆ ಬರುವನ ।ಅ ಪ।

ಪಂಚ ವೃಂದಾವನದಿ ಮೆರೆಯುವ
ಪಂಚ ಬಾಣನ ಪಿತನ ಸ್ಮರಿಸುವ
ಪಂಚ ನಂದನ ಮುಂದೆ ಆಗುತ
ಮಿಂಚಿನಂದದಿ ಪೊಳೆವ ಮಹಿಮನ ।೧।

ಪಂಕ ಪಾತಕ ಕಳೆವ ದೇವನ
ಪಂಕಜಾರಿ ನಿಭೇಂದುವಕ್ತ್ರನ । ಆ
ತಂಕವಿಲ್ಲದೆ ಭಜಿಪ ಸುಜನರ
ಶಂಕೆ ಬಿಡಿಸುವ ಶಂಕರೇಶನ ।೨।

ಭಜಿಸುವವರಿಗೆ ಭಾಗ್ಯ ಕೊಡುವನ
ಋಜುಗಣೇಶಾಮರೇಂದ್ರ ವಂದಿತ
ನಿಜಪುರಂದರವಿಟ್ಠಲೇಶನ
ಭಜನೆ ಮಾಡುವ ಭಾವಿ ಮರುತರ ।೩।



ರಾ ಗ – ಹಿ ಂ ದೂ ಸ್ಥಾ ನಿ  :  ತಾ ಳ – ಆ ದಿ ತಾ ಳ

ರಾಜರ ಭಾಗ್ಯವಿದು ವಾದಿರಾಜರ ಭಾಗ್ಯವಿದು ಸೋದೆ
ರಾಜರ ಭಾಗ್ಯವಿದು ।ಪ।

ರಾಜರ ಭಾಗ್ಯವೆಂತು ವರ್ಣಿಪೆನು ನಾ
ವಾಜಿವದನನ ಸದಾ ಪೂಜಿಪ ಭಾಗ್ಯವು ।೧।

ಐದು ಪರ್ಯಾಯದಿ ಕೃಷ್ಣನ ಪೂಜೆಯ
ಸಾದರದಲಿ ರಚಿಸಿರ್ದ ವಿಭವವಿದು ।೨।

ಸುರರ ವಿಮಾನವ ತಡೆದು ನಿಲ್ಲಿಸಿದ
ಮರುತನ ಪದವ ಮುಂದೇರುವ ಭಾಗ್ಯವು ।೩।

ಬದರಿಕಾಶ್ರಮದಿಂದ ನದಿಯ ಪೆತ್ತನ ತಂದು
ಸದನದೊಳಿರಿಸಿದುದತಿ ವಿಭವ ।೪।

ಸೋದೆಯಪುರದಿ ರಾಜೇಶಹಯಾಸ್ಯನ
ಪಾದವ ಭಜಿಸುತ ನಿಂದಿಹ ಭಾಗ್ಯವು ।೫।

**ಶ್ರೀ ವ್ಯಾ ಸ ರಾ ಜ ಗು ರು ಭ್ಯೋ ನ ಮಃ**





ಶ್ರೀವ್ಯಾಸರಾಯರು – ನವವೃಂದಾವನ

ಅರ್ಥಿಕಲ್ಪಿತಕಲ್ಪೋಽಯಂ ಪ್ರತ್ಯರ್ಥಿಗಜಕೇಸರೀ ।
ವ್ಯಾಸತೀರ್ಥಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥

ಬೇಡುವವರಿಗೆ ಕಲ್ಪವೃಕ್ಷದಂತಿರುವ, ಪ್ರತಿವಾದಿಗಳೆಂಬ ಆನೆಗಳಿಗೆ ಸಿಂಹದಂತಿರುವ ವ್ಯಾಸತೀರ್ಥರು ನನ್ನ ಅಭೀಷ್ಟಗಳನ್ನು ಪೂರೈಸಲಿ.

( ಆ ರಾ ಧ ನೆ : ಫಾ ಲ್ಗು ಣ ಮಾ ಸ ಕೃ ಷ್ಣ ಪ ಕ್ಷ ಚ ತು ರ್ಥಿ )




ರಾಗ – ಪೂರ್ವಿ : ತಾಳ – ಆದಿತಾಳ

ಇದಿರದಾವನು ನಿನಗೀ ಧರೆಯೊಳು
ಪದುಮನಾಭನ ದಾಸ ಪರಮೋಲ್ಲಾಸ ।ಪ।

ವಾದಿತಿಮಿರ ಮಾರ್ತಾಂಡನೆಂದೆನಿಸಿದೆ
ವಾದಿಶರಭ ಭೇರುಂಡ ವ್ಯಾಸರಾಯ ।೧।

ಯತಿಗಳೊಳು ನಿನ್ನಂದದವರುಗಳ
ಪ್ರತಿಗಾಣೆ ಈ ಕ್ಷಿತಿಯೊಳು ಯತಿರಾಯ ।೨।

ಹಮ್ಮನಳಿದು ಶ್ರೀಪತಿ ರಂಗವಿಟ್ಠಲನ್ನ
ಸುಮ್ಮಾನದಿಂ ಸೇವಿಪ ವ್ಯಾಸಮುನಿರಾಯ ।೩।



ರಾ ಗ – ಕಾ ಂ ಬೋ ದಿ : ತಾ ಳ – ಆ ದಿ ತಾ ಳ

ಯೋಗಿ ವ್ಯಾಸರಾಯರೆಂಬ ವಿಚಿತ್ರ ಮೇಘ
ಬೇಗ ವಿಷ್ಣುಪದವ ತೋರಿಸುತ್ತ ಬಂತಿದಿಕೊ । ಪ ।

ಮಾಯಿಮತವೆಂಬ ತಾರಾಮಂಡಲವ ಮುಸುಕುತ್ತ
ವಾಯುಗತಿಯಂತೆ ಗಮಿಸುತ್ತಲಿ
ಹೇಯ ಕಾಮಾದಿಗಳೆಂಬ ರಜವನಡಗಿಸುತ್ತ
ನಾಯಕನುಪೇಂದ್ರನಾಜ್ಞೆಯ ಪಡೆದು । ೧ ।

ಅಂಗಜನಯ್ಯನೇ ಪರನೆಂದು ಘುಡುಘುಡಿಸುತ್ತ
ಕಂಗಳೆಂಬ ಮಿಂಚನೆ ನೆರಹಿ ಲೋಕದಿ
ಹಿಂಗದೆ ಪರಿವ ಅಜ್ಞಾನವೆಂಬ ಕತ್ತಲೆಯ
ಭಂಗಿಸಿ ಸುರಪಥವ ತೋರಿಸುತ್ತ । ೨ ।

ಸಿರಿಯರಸನ ಸಮ್ಯಗ್ ಜ್ಞಾನವೆಂಬ ಪೈರಿಗೆ
ಬೇರು ಬಿಡೆ ಹರಿಕಥೆಯೆಂಬ ಮಳೆಗರೆದು
ನೆರಶಿಷ್ಯಮನವೆಂಬ ಕೆರೆಯ ತುಂಬಿಸಿ ಕರಗಳೆಂಬ
ಕೋಡಿ ಹರಿಸುತ ವಿಜಯೀಂದ್ರನಗುರು । ೩ ।

## ಶ್ರೀ ಶ್ರೀ ಪಾ ದ ರಾ ಜ ಗು ರು ಭ್ಯೋ ನ ಮಃ



ಶ್ರೀ ಶ್ರೀ ಪಾ ದ ರಾ ಜ ರು – ಮುಳುಬಾಗಿಲು

ಶ್ರೀಪೂರ್ಣಬೋಧ ಕುಲವಾರ್ಧಿ ಸುಧಾಕರಾಯ
ಶ್ರೀ ವ್ಯಾಸರಾಜ ಗುರವೇ ಯತಿಶೇಖರಾಯ
ಶ್ರೀರಂಗವಿಟ್ಠಲ ಪದಾಂಬುಜ ಬಂಭರಾಯ
ಶ್ರೀಪಾದರಾಜಗುರವೇಸ್ತು ನಮಶ್ಶುಭಾಯ

ಪೂರ್ಣಪ್ರಜ್ಞರ ವಂಶವೆಂಬ ಸಮುದ್ರಕ್ಕೆ ಚಂದ್ರನಂತಿರುವ, ವ್ಯಾಸ–ರಾಜರಿಗೂ ಗುರುಗಳಾದ, ಯತಿಚಂದ್ರಮರಾದ ಶ್ರೀರಂಗವಿಟ್ಠಲನ ಪಾದ ಕಮಲದಲ್ಲಿ ಸದಾ ನಿರತರಾದ ಶ್ರೀಪಾದರಾಜರಿಗೆ ನಮಸ್ಕಾರವು.

ಜ್ಞಾನ ವೈರಾಗ್ಯ ಭಕ್ತ್ಯಾದಿ ಕಲ್ಯಾಣಗುಣ ಶಾಲಿನಃ ।
ಲಕ್ಷ್ಮೀನಾರಾಯಣಮುನೀನ್ವಂದೇ ವಿದ್ಯಾಗುರೂನ್ಮಮ ॥

ಜ್ಞಾನ, ವೈರಾಗ್ಯ, ಭಕ್ತಿಯೇ ಮೊದಲಾದ ಮಂಗಳ ಗುಣಗಳಿಂದ ಕೂಡಿರುವ ನನ್ನ ವಿದ್ಯಾಗುರುಗಳಾದ ಲಕ್ಷ್ಮೀನಾರಾಯಣ ಮುನಿಗಳನ್ನು ವಂದಿಸುತ್ತೇನೆ.

( ಆ ರಾ ಧ ನೆ : ಜೇ ಷ್ಠ ಮಾ ಸ ಶು ಕ್ಲ ಪ ಕ್ಷ ಚ ತು ರ್ದ ಶಿ )



ಶ್ರೀ ಶ್ರೀ ಪಾ ದ ರಾ ಜ ರು – ಮುಳುಬಾಗಿಲು

ರಾ ಗ – ಪ ಂ ತು ವ ರಾ ಳಿ : ತಾ ಳ – ಛಾ ಪು ತಾ ಳ

ಮಹಿಮೆ ಸಾಲದೇ ಇಷ್ಟೇ ಮಹಿಮೆ ಸಾಲದೆ ।ಪ।

ಅಹಿಶಯನನ ಒಲುಮೆಯಿಂದ
ಮಹಿಯೊಳೆಮ್ಮ ಶ್ರೀಪಾದರಾಜರ ।ಅ ಪ।

ಮುತ್ತಿನ ಕವಚ ಮೇಲ್ಕುಲಾವಿ
ರತ್ನ ಕೆತ್ತಿದ ಕರ್ಣ ಕುಂಡಲ
ಕಸ್ತೂರಿ ತಿಲಕ ಶ್ರೀಗಂಧ ಲೇಪನ
ವಿಸ್ತಾರದಿಂದ ಮೆರೆದು ಬರುವ ।೧।

ವಿಪ್ರಗೆ ಬ್ರಹ್ಮತ್ಯ ದೋಷ ಬರಲು
ಕ್ಷಿಪ್ರ ಶಂಖೋದಕದಿ ಕಳೆಯೆ
ಅಪ್ರಬುದ್ಧರು ದೂಷಿಸೆ ಗೇರೆಣ್ಣೆ
ಕಪ್ಪು ವಸನ ಹಸನ ಮಾಡಿದ ।೨।

ಹರಿಗೆ ಸಮರ್ಪಿಸಿದ ನಾನಾ
ಪರಿಯ ಶಾಖಂಗಳನು ಭುಂಜಿಸೆ
ನರರು ನಗಲು ಶ್ರೀಶಕೃಷ್ಣನ
ಕರುಣದಿಂದ ಹಸಿಯ ಮಾಡಿದ । ೩ ।



ವಿಜಯನಗರದ ಸಾಮಂತ ರಾಜನಾದ ಚಂದ್ರಗಿರಿ ಸಾಳವ ನರಸಿಂಹ ಭೂಪಾಲನು ಪದ್ಮನಾಭತೀರ್ಥರ ಪರಂಪರೆಯಲ್ಲಿ ಬಂದ ಶ್ರೀ ಶ್ರೀಪಾದರಾಜ ಯತಿಗಳಿಗೆ
ರಾಜೇಂದ್ರತೀರ್ಥರ ಪರಂಪರೆಯಲ್ಲಿ ಬಂದ ವ್ಯಾಸರಾಜ ಯತಿಗಳ ಸಮ್ಮುಖದಲ್ಲಿ ಪಾದಪೂಜೆ ಮಾಡಿ ಪುನೀತನಾಗುತ್ತಿರುವ ದೃಶ್ಯ

ರಾ ಗ – ಉ ದ ಯ ರಾ ಗ : ತಾ ಳ – ತ್ರಿ ಪು ಟ ತಾ ಳ

ಶ್ರೀಪಾದರಾಯರ ದಿವ್ಯ ಶ್ರೀಪಾದವ ಭಜಿಸುವೆ । ಪ ।

ವಾಗ್ವಜ್ರಗಳಿಂದ ಮಾಯಾವಾದಿಗಳೆಲ್ಲರ ಬಾಯ
ಬೀಗವನಿಕ್ಕಿ ಮುದ್ರಿಸಿದ ಬಿಂಕಗಳ ಬಿಡಿಸುವ । ೧ ।

ವ್ಯಾಸರಾಯರಿಗೆ ವಿದ್ಯಾಭ್ಯಾಸವ ಮಾಡಿಸುವ
ದಾಸರ ನಾಮಗಳಿಂದ ಲೇಸುಲೇಸೆಂದೆನಿಸಿಕೊಂಬ । ೨ ।

www.vijayadasaru.net



ಮಧ್ವಮತದಲ್ಲಿ ಪುಟ್ಟಿ ಮಾಯಾವಾದಿಗಳ ಕುಟ್ಟಿ
ಗೆದ್ದು ಮೆರೆದನು ದಿಟ್ಟ ಗುರುರಾಯ ಜಗಜಟ್ಟಿ ।೩।

ಸುವರ್ಣವರ್ಣತೀರ್ಥರ ಸುತ ಶ್ರೀಪಾದರಾಯರ
ಅವರ ನಾಮಗಳಿಂದ ಕಾವನಯ್ಯ ಕರುಣಾನಿಧಿ ।೪।

ವರದ ವೇಂಕಟೇಶನ್ನ ಒಲಿದು ಪೂಜಿಸುವನ
ಕರುಣದಿಂದ ಹಯವದನ ಸಲಹೋ ಯತಿರನ್ನ ।೫।



ಶ್ರೀ ಶ್ರೀ ಪಾ ದ ರಾ ಜ ರು – ಮುಳುಬಾಗಿಲು

ರಾ ಗ – ನಾ ಟಿ : ತಾ ಳ – ಅ ಟ ತಾ ಳ


ವಾದಿಗಜ ಮಸ್ತಕಾಂಕುಶ ಸುಜನ ಬುಧಗೇಯ
ಮೇದಿನೀಸುರ ವಂದ್ಯ ಶ್ರೀಪಾದರಾಯ ।ಪ।

ಸಕಲಶಾಸ್ತ್ರ ಕಲಾಪ ಸಂನ್ಯಾಸ ಕುಲದೀಪ ।
ಸಕಲ ಸತ್ಯಸ್ಥಾಪ ಸುಜ್ಞಾನ ದೀಪ ॥
ಪ್ರಕಟ ಪಾವನರೂಪ ಅರಿಕುಜನ ಮತಲೋಪ ।
ನಿಕಟವರ್ಜಿತಪಾಪ ಕೀರ್ತಿಪ್ರತಾಪ ।೧।

ಹರಿಪದಾಂಬುಜ ಭೃಂಗ ಪರಮತಾಹಿವಿಹಂಗ ।
ಪರಮ ಸುಗುಣಾಂತರಂಗ ಭವದುರಿತಭಂಗ ॥
ಶರಣ ಕೀರ್ತಿ ತರಂಗ ಶತ್ರುತಿಮಿರ ಪತಂಗ ।
ಶರಣು ಶುಭ ಚರಿತಾಂಗ ಷಟ್ಶಾಸ್ತ್ರಸಂಗ । ೨ ।

ಸಿರಿಕೃಷ್ಣ ದಿವ್ಯ ಪಾದಾಬ್ಜ ಚಿಂತಾಲೋಲ ।
ವರ ಹೇಮವರ್ಣ ಮುನಿಪತಿಯ ಸುಕುಮಾರ ॥
ಗುರುತಿಲಕ ಶ್ರೀಪಾದರಾಯ ಅಮಿತೋದ್ಧಾರ ।
ಶರಣಜನ ಸುರಧೇನು ಭಕ್ತಮಂದಾರ । ೩ ।

**ಶ್ರೀ ಬ್ರ ಹ್ಮ ಣ್ಯ ತೀ ರ್ಥ ಗು ರು ಭ್ಯೋ ನ ಮಃ**



ಶ್ರೀ ಬ್ರ ಹ್ಮ ಣ್ಯ ತೀ ರ್ಥ ರು – ಅಬ್ಬೂರು

ಕಂಸಧ್ವಂಸಿ ಪದಾಂಭೋಜ ಸಂಸಕ್ತೋ ಹಂಸಪುಂಗವಃ ।
ಬ್ರಹ್ಮಣ್ಯ ಗುರುರಾಜಾಖ್ಯೋ ವರ್ತತಾಂ ಮಮ ಮಾನಸೇ ॥

ಕಂಸನನ್ನು ಸಂಹರಿಸಿದ ಕೃಷ್ಣನ ಪಾದವೆಂಬ ಕಮಲದಲ್ಲಿ ಆಸಕ್ತರಾದ, ಯತಿಶ್ರೇಷ್ಠರಾದ ಬ್ರಹ್ಮಣ್ಯತೀರ್ಥರು ನನ್ನ ಮನಸ್ಸಿನಲ್ಲಿ ನೆಲಸಲಿ.

( ಆ ರಾ ಧ ನೆ : ವೈ ಶಾ ಖ ಮಾ ಸ ಬ ಹು ಳ ಏ ಕಾ ದ ಶೀ )

ಶ್ರೀವ್ಯಾಸರಾಜಪೂಜ್ಯಚರಣವಿರಚಿತ
ಶ್ರೀಬ್ರಹ್ಮಣ್ಯತೀರ್ಥಗುರುರಾಜ

**ಪಂಚರತ್ನಮಾಲಿಕಾಸ್ತೋತ್ರಮ್**



ಬ್ರಹ್ಮಣ್ಯತೀರ್ಥರು – ನರನಾರಾಯಣರ ಸನ್ನಿಧಾನದಲ್ಲಿ

ವಂದೇ ಬ್ರಹ್ಮಣ್ಯತೀರ್ಥಂ ಶುಭತಮಚರಿತಂ ಸೇವಿತಶ್ರೀಸಮೇತಂ ।
ಶಾಂತಂ ದಾಂತಂ ಮಹಾಂತಂ ಗುರುಗುಣಭರಿತಂ ಯೋಗಿಸಂಘೈರುಪೇತಂ ॥
ಕಾಮಕ್ರೋಧಾದ್ಯತೀತಂ ಕುಮತಿಭಿರಜಿತಂ ಕಲ್ಮಷಾಂಬೋಧಿಪೋತಂ ।
ಧೀರಂ ಭೂದೇವಗೀತಂ ಶುಭಜನಮಹಿತಂ ಧನ್ಯಮಾನಂ ವಿನೀತಂ ।೧।